

# ಮದುವೆಗಳು ಇಲ್ಲಿ ಕಾಡನ್ನೂ ಸೃಷ್ಟಿಸುತ್ತವೆ

ಮೈತಿಯ ಲಾಂಛನ

ನ್ಯೂಟನ್‌ನ ತಲೆಯ ಮೇಲೆ ಬಿದ್ದ ಒಂದು ಸೇಬು ಗುರುತ್ವಾಕರ್ಷಣ ನಿಯಮ ತಿಳಿಸಿಕೊಡಲು ನಿಮಿತ್ತ ಆಯಿತು. ನಮ್ಮ ದೇಶದ ಉತ್ತರದ ಪರ್ವತ ಶ್ರೇಣಿಯಲ್ಲಿ ಈಚೆಗೆ ಇಂತಹದೇ ಘಟನೆ ನಡೆಯಿತು. ಕಲ್ಯಾಣ್‌ಸಿಂಗ್ ರಾವತ್ ಎಂಬವರಿಗೆ ಅವರ ಮಾವನ ಮನೆಯಲ್ಲಿ ತಿನ್ನಲು ಒಂದು ಸಿಹಿಸಿಹಿ ಪಪಾಯಿ ಸಿಕ್ಕಿತು. ಅದು ಆ ರಾಜ್ಯದಲ್ಲಿ- ಉತ್ತರಾಂಚಲ್- ಒಂದು ಹಸಿರು ಆಂದೋಲನಕ್ಕೇ ಜನ್ಮ ಕೊಟ್ಟಿತು!

❀ ಚಿತ್ರ-ಲೇಖನ: ಶ್ರೀ ಪಡ್ರೆ



ಕಲ್ಯಾಣ್‌ಸಿಂಗ್ ರಾವತ್

ಅದು ನಡೆದದ್ದು ಹೀಗೆ:

ಕಲ್ಯಾಣ್‌ಸಿಂಗ್ ವಿವಾಹ ನಡೆದದ್ದು ಎರಡು ದಶಕ ಹಿಂದೆ. ಮದುವೆ ಮುಗಿಸಿ ವಧೂ- ವರರು ಮಾವನ ಮನೆಗೆ ಹೋಗುವಾಗ ದಾರಿಯಲ್ಲಿ ಇವರು ನೆಂಟರ ಮನೆಯಲ್ಲಿ ತಂಗಬೇಕಾಯಿತು. ಅಲ್ಲಿ ಬಡಿಸಿದ್ದು ರಸಗವಳದ ಜತೆ ಸ್ವಾದಿಷ್ಟ ಪಪಾಯಿ ಹಣ್ಣು. ಮದುಮಕ್ಕಳಿಗೆ ಹಣ್ಣು ಪಸಂದಾಯಿತು. ಪತ್ನಿ ಮಂಜು ಒಂದಿಷ್ಟು ಬೀಜ ಇಸ್ಕೊಂಡರು. ತವರಿನ ಹಿತ್ತಿಲಲ್ಲಿ ಊರಿದರು. ಮದುವೆಯ ಹೊಸತರ ಸಂಭ್ರಮದಲ್ಲಿ ಈ ವಿಚಾರ ಮನದಿಂದ ಮರೆತೇ ಹೋಯಿತು.

ವರ್ಷದ ನಂತರ ಒಂದು ಸಲ ಕಲ್ಯಾಣ್ ತಮ್ಮ ಮಾವನ ಮನೆಗೆ ಹೋದರು. ಅದೇ ಪಪಾಯಿಯ ಸಮಾರಾಧನೆ!

ಈ ದುರ್ಗಮ ಪ್ರದೇಶಕ್ಕೆ ಸರಕಾರಿ ಕಾರ್ಯಕ್ರಮಗಳು ತಲುಪುವುದು ಉಳಿದೆಡೆಯೆಲ್ಲಾ ಮುಗಿದ ನಂತರ. ಕಾಡು ಕಡಿಯುವುದೇ ತಮ್ಮ ಸಮಸ್ಯೆಗೆ ಪರಿಹಾರ ಎಂಬ ನಂಬಿಕೆ ಹಳ್ಳಿಗರಲ್ಲಿತ್ತು. ಬದಲಿಗೆ ಅದು ಹಲವು ತಲೆನೋವುಗಳನ್ನು ಸೃಷ್ಟಿಸುತ್ತದೆ ಎಂಬ ಅರಿವು ಮೂಡಿದ್ದು ತುಂಬ ತಡವಾಗಿ. ಅಷ್ಟು ಹೊತ್ತಿಗೆ ಬೋಳಾದ ಪರ್ವತಗಳು ಅಲ್ಲಲ್ಲಿ ಕುಸಿಯತೊಡಗಿದ್ದುವು. ಗುಡ್ಡಗಳು ನಗ್ನವಾದಾಗ ಜಲಮೂಲಗಳು ಬತ್ತಿಹೋದುವು. ಮಣ್ಣಿನ ಸವಕಳಿಯಿಂದ ಆಹಾರ ಉತ್ಪಾದನೆಗೇ ಕುತ್ತು ಬರತೊಡಗಿತು. ಇದೇ ಕಾಲಘಟ್ಟದಲ್ಲಿ ಇಲ್ಲಿ ಚಿಪ್ಕೋ ಆಂದೋಲನ ರೂಪುಗೊಂಡಿತು. ಹೆಣ್ಮಕ್ಕಳದೇ ನೇತೃತ್ವ. ಉರುವಲು, ಕುಡಿಯುವ ನೀರುಗಳಿಗೆ ಕೂಡಾ ಕಿಲೋಮೀಟರುಗಟ್ಟಲೆ ನಡೆಯಬೇಕಾದ ಮಂದಿಗೆ ಕಾಡು ಬೆಳೆಸುವ ಅಗತ್ಯ ಅರ್ಥವಾಗಹತ್ತಿತು.

ಬೆಟ್ಟಗಳಲ್ಲಿ ಅರಣ್ಯ ಬೆಳೆಸಲು ಈ ತವರಿನ ಗಾಢ ಆತ್ಮೀಯತೆಯನ್ನು ಬಳಸಿಕೊಂಡರೆ ಹೇಗೆ? ತಮ್ಮ ಮಾವನ ಮನೆಯ ದೃಷ್ಟಾಂತ ಕಲ್ಯಾಣ್ ಅವರನ್ನು ಚಿಂತನೆಗೆ ಹಚ್ಚಿತು. ವರ್ಷಗಳ ನಂತರ ಈ ಹೊಳಹು ಆಚರಣೆಗೆ ಬಂದದ್ದು 'ಮೈತಿ'ಯ ರೂಪದಲ್ಲಿ. 1994ರಲ್ಲಿ ಚಮೋಲಿ ಜಿಲ್ಲೆಯ ಗ್ವಾಲ್‌ದಂ ಎಂಬ ಹಳ್ಳಿಯಲ್ಲಿ ಮೊದಲ ಮೈತಿ ಆಚರಣೆ.

'ಮೈತ್' ಎಂದರೆ ಪಹಾಡಿ ಭಾಷೆಯಲ್ಲಿ ತವರು ಮನೆ. ತವರೂರು ಅಂತಲೂ ಹೇಳಬಹುದು. 'ಮೈತಿ' ಎನ್ನುವ ಶಬ್ದಕ್ಕೆ ಸಮೃದ್ಧಿ (Prosperity) ಎಂಬ ಅರ್ಥವಿದೆ. ಮೈತಿ ಆಚರಣೆಯ ಸಾರವನ್ನು ಕಲ್ಯಾಣ್ ಹೀಗೆ ಹೇಳುತ್ತಾರೆ: "ಪ್ರತಿ ಮದುವೆಯ ಮಧುರ ನೆನಪಿಗಾಗಿ ಒಂದು ನಿತ್ಯಹಸಿರು ಗಿಡ ನೆಡುವುದು."

'ಮೈತಿ ಬಳಗ' ಅವಿವಾಹಿತ ಹೆಣ್ಮಕ್ಕಳ ಸಂಘಟನೆ. ಬಳಗದಲ್ಲಿ ಒಬ್ಬಾಕೆ ಮುಖ್ಯಸ್ಥೆ. ಆಕೆಗೆ ಔಪಚಾರಿಕ ಪದವಿನಾಮ ಇಲ್ಲ. ಎಲ್ಲರಿಗೂ ಆಕೆ ದೊಡ್ಡಕ್ಕ - ಬಡೀ ಬೆಹೆನ್.

ಮೈತಿ ಬಳಗದ ಸದಸ್ಯೆಯರು ತಂತಮ್ಮ ಮನೆಯ ಬಳಿ ಅಥವಾ ಊರಿನ ಶಾಲೆಯಲ್ಲಿ ಪ್ರತಿವರ್ಷ ಬೀಜ ಹಾಕಿ ಗಿಡ ತಯಾರುಮಾಡುತ್ತಾರೆ. ಎಲ್ಲವೂ ಸ್ಥಳೀಯ ಜಾತಿಯವು. ಪ್ರತಿ ಮಳೆಗಾಲದಲ್ಲಿ ಈ ಹುಡುಗಿಯರು ಒಂದೊಂದು ಗಿಡ ನೆಡಬೇಕು. ಮನೆಯಲ್ಲಿ ಎಷ್ಟು ಕನ್ಯೆಯರಿದ್ದಾರೋ ಅಷ್ಟು ಗಿಡ. ಸ್ವಂತ ಜಮೀನಿನಲ್ಲಿ ನೆಡುವುದೂ ಇದೆ. ಸಾಮುದಾಯಿಕ ಜಾಗಗಳೂ ಬೋಳಾಗಿದ್ದರೆ ಊರವರೆಲ್ಲಾ ಸೇರಿ ಅಲ್ಲಿ ಗಿಡ ಹಚ್ಚುವುದೂ ಸಾಮಾನ್ಯ.

ಮೈತಿಯ ಮುಖ್ಯ ಅಡಿಪಾಯ ಇರುವುದು ಮದುವೆ ಸಮಾರಂಭಕ್ಕೆ ಗಿಡ ನಾಟಿಯನ್ನು ತಳಕು ಹಾಕಿರುವುದರಲ್ಲಿ. 11 ವರ್ಷಗಳ ಹಿಂದೆ ಪ್ರಯೋಗವಾಗಿ ಆರಂಭವಾದ ಈ ಜಾಣ ಕೆಲಸ ಈಗ ಈ ಭಾಗದ ಒಂದು ಪರಂಪರೆಯೇ ಆಗಿಬಿಟ್ಟಿದೆ. ಈ ಕೆಲಸವನ್ನು ಊರಿನ ಎಲ್ಲ ಸಮುದಾಯದವರಾದವರೂ ಪ್ರೀತಿಯಿಂದ ಮಾಡುತ್ತಾರೆ.

ಊರಿನಲ್ಲಿ ಯಾರ ಮನೆಯಲ್ಲಾದರೂ ವಿವಾಹ ನಿಶ್ಚಯವಾಯಿತೆಂದರೆ ಸ್ಥಳೀಯ ಮೈತಿ ಬಳಗ ಚುರುಕಾಗುತ್ತದೆ. ಮದುವೆಯಾಗುವ ಹೆಣ್ಣಿಗೇ ನೆಡಲು ಒಂದು ಗಿಡ ತಯಾರಿಸಿ ಇಟ್ಟುಕೊಳ್ಳುವುದೂ ಇದೆ. ಬಳಗದ ಸಹವರ್ತಿಗಳು ಹತ್ತಿರದ ಜಮೀನಿನ ಆಯ್ದ ಸ್ಥಳದಲ್ಲಿ ಗುಂಡಿ ತೋಡುತ್ತಾರೆ. ಸೆಗಣಿ, ಗೊಬ್ಬರ ಹಾಕಿಟ್ಟು ಕಾಯುತ್ತಾರೆ.

ಮದುವೆ ದಿನ ಮೈತಿ ಕಾರ್ಯಕ್ರಮಕ್ಕೆಂದೇ ಸಮಯ ನಿಗದಿ ಮಾಡುತ್ತಾರೆ. ಇದನ್ನು ಆಮಂತ್ರಣ ಪತ್ರಿಕೆಯಲ್ಲೂ ಪ್ರತ್ಯೇಕವಾಗಿ ಮುದ್ರಿಸುತ್ತಾರೆ. ವಿವಾಹದ ದಿನ ಪ್ರವೇಶದ್ವಾರದಲ್ಲಿ ಮೈತಿ ಬಳಗದ ಒಂದು ಬ್ಯಾನರ್ ವರನನ್ನು ಸ್ವಾಗತಿಸುತ್ತದೆ.

ವಿವಾಹದ ವಿಧಿ-ವಿಧಾನಗಳು ಮುಗಿದ ನಂತರ ವಧೂ-ವರರು ಇಷ್ಟಮಿತ್ರರೊಂದಿಗೆ ಗುಡ್ಡಕ್ಕೆ ಹೋಗುತ್ತಾರೆ. ಗಿಡ



ಪೈನೋಲೀ ಗ್ರಾಮದ ಬೋಳುಗುಡ್ಡದ ನೆತ್ತಿಯಲ್ಲಿ 'ಮೈತಿ ಅರಣ್ಯ'

ನೆಡುವುದು ಮದುಮಗ. ವಧೂ ಅದಕ್ಕೆ ನೀರೆರೆಯಬೇಕು. ಅನಂತರ ಪುರೋಹಿತರು ಗಿಡಕ್ಕೆ ಆಶೀರ್ವಾದ ಮಾಡುತ್ತಾರೆ. ಗಿಡ ನೆಟ್ಟುಬಿಟ್ಟರಾಯಿತೇ? ಅದನ್ನು ನೋಡಿಕೊಳ್ಳಬೇಡವೇ? ಇದಕ್ಕಾಗಿ ವರ ಅಲ್ಲಿನ ಮೈತಿ ಬಳಗಕ್ಕೆ ಮನಸ್ಸಂತೋಷ ಇರುವಷ್ಟು ಮೊತ್ತ ಕೊಡಬೇಕು. "ಬಡವರು 200– 300 ರೂಪಾಯಿ ಕೊಟ್ಟರೆ ಎರಡರಿಂದ ಐದು ಸಾವಿರ ರೂಪಾಯಿಯನ್ನು ಕೊಟ್ಟವ್ರಿದ್ದಾರೆ" ಎನ್ನುತ್ತಾರೆ ಕಲ್ಯಾಣ್.

ಈ ದೇಣಿಗೆಯನ್ನು ಬಳಗ ಬ್ಯಾಂಕಿನಲ್ಲಿಡುತ್ತದೆ. ಈ ನಿಧಿಗೆ 'ಮೈತಿ ಕೋಶ್' ಅಂತ ಹೆಸರು. ಇದು ಬಡ ಹೆಣ್ಮಕ್ಕಳ ಶಾಲಾ ಶುಲ್ಕ, ಬಟ್ಟೆ– ಬರೆ, ಪುಸ್ತಕಗಳಿಗೆ, ಅನಾರೋಗ್ಯಪೀಡಿತರ ಔಷಧಕ್ಕೆ, ಮದುವೆಗೆ ಸಹಾಯಕ್ಕೆ– ಹೀಗೆ ವೆಚ್ಚವಾಗುತ್ತದೆ. ಹಣವನ್ನು ಹೀಗೆ ಅಶಕ್ತರ ಸಹಾಯಕ್ಕೆ ಬಳಸುವ ಮೈತಿ ಬಳಗ ನೆಟ್ಟ ಗಿಡದ ರಕ್ಷಣೆಯ ಕೆಲಸ ಮರೆಯುವುದಿಲ್ಲ.

ಉತ್ತರಾಂಚಲದ 13 ಜಿಲ್ಲೆಗಳಲ್ಲೂ ಮೈತಿ ಬಳಗವಿದೆ. "ಹೆಚ್ಚುಕಮ್ಮಿ 8000 ಗ್ರಾಮಗಳಿಗೆ ಈ ಆಂದೋಲನ ಹಬ್ಬಿದ್ದು ಅಲ್ಲೆಲ್ಲಾ ಮೈತಿ ಬಳಗಗಳು ಕೆಲಸ ಮಾಡುತ್ತಿವೆ" ಅಂತ ಕಲ್ಯಾಣ್ ಅಂದಾಜು ಮಾಡುತ್ತಾರೆ.

ಹೊಸದಾಗಿ ಗಿಡ ನೆಡುವಾಗ, ಸ್ಥಳೀಯ ಅಗತ್ಯಕ್ಕೆ ಆಗುವಂತಹ ಮರಜಾತಿಗಳ ಆಯ್ಕೆ. ಬಯಲಿನಲ್ಲಿ ಮಾವು, ಲಿಚ್ಚಿ, ಪೇರಳೆಯಂತಹ ಹಣ್ಣಿನ ಗಿಡಗಳು. ಅದೇ ಹಿಮಾಲಯದ ತಂಪುವಲಯಕ್ಕೆ ಬಂದರೆ ಸೇಬು, ನಾಶಪತ್ರಿ, ಅಕ್ರೋಟ್, ಖುಮಾನಿ (Walnut) ಆಡು (*Prunus*) ಇತ್ಯಾದಿ ಹಣ್ಣಿನವು. ಬಾಂಜೋ ಎಂದು ಸ್ಥಳೀಯವಾಗಿ ಕರೆಯುವ (*Quaricus indicana*) ಮರ ಇಲ್ಲಿನ ಜನರಿಗೆ ಅಚ್ಚುಮೆಚ್ಚು. ಭೀಮಲ್, ಡೆಂಕಣ್, ಖಡೀಕ್, ಕುಯಿರಾಲ್ ಇತ್ಯಾದಿ ನೆರಳು ಕೊಡುವ ಮರವನ್ನೂ ನೆಡುವುದಿದೆ. "ಕಳೆದೊಂದು ದಶಕದಲ್ಲಿ ಇಲ್ಲಿನ ಜನರು ನೆಟ್ಟಿ ಒಟ್ಟು ಗಿಡಗಳ ಸಂಖ್ಯೆ ಒಂದೂವರೆ ಲಕ್ಷ ಮೀರಬಹುದು" ಎನ್ನುತ್ತಾರೆ ಕಲ್ಯಾಣ್.

'ಮೈತಿ ಅರಣ್ಯ' ಅಂತ ಪ್ರತ್ಯೇಕವಾಗಿ ಗುರುತಿಸಬರುವುದಿಲ್ಲ. ಆದರೆ ಕೆಲವೊಂದು ಬೋಳುಗುಡ್ಡೆಗಳಿರುವಲ್ಲಿ ಸಾಮೂಹಿಕವಾಗಿ ನೆಡುವುದಿದೆ. 22 ಕಡೆ 'ಮೈತಿ ಅರಣ್ಯ' ಅಂತಲೇ ಗುರುತಿಸಬಹುದಾದ ಕಾಡು ಮೇಲೇಳುತ್ತಿದೆಯಂತೆ.

## ಹುತಾತ್ಮರ ನೆನಪಿಗೆ ಅರಣ್ಯ

ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಯೋಧರ ನೆನಪಿಗೆ ಬಧಾನ್‌ಗಢ್ ಮೈತಿ ಬಳಗ ಅಲ್ಲಿನ ಬೋಳುಗುಡ್ಡದಲ್ಲಿ 1001 ಗಿಡ ನೆಟ್ಟದೆ. ಇತ್ತೀಚೆಗೆ ಬದರಿನಾಥ ದೇವಸ್ಥಾನದ ಬಾಗಿಲು ತೆರೆಯುವ ಹೊತ್ತಿಗೆ ಇವರು ಒಂದು ವಿಶಿಷ್ಟ ಕಾರ್ಯಕ್ರಮ ಹಾಕಿಕೊಂಡರು. ಭಕ್ತರ ಪ್ರವಾಹ ಇದ್ದಾಗಲೇ ಅವರೆದುರು ಇಲ್ಲಿನ ಗುಡ್ಡಗಳಲ್ಲಿ ಸಸಿ ಹಚ್ಚಿದರು. ನೂರಕ್ಕೂ ಹೆಚ್ಚು ಸ್ವಯಂಸೇವಕರು 13 ದಿನದಲ್ಲಿ ಒಟ್ಟು 20,000 ಗಿಡ ನೆಟ್ಟರು.

"ನೋಡಿ, ಕೆಲವೊಂದೆಡೆ ಈ ಸಲದ ರಾಖಿ ದಿನ ರಾಖಿ ಕಟ್ಟುವುದಕ್ಕೆ ಬದಲು ಗಿಡ ನೆಟ್ಟರು" ಎಂದು ಕಲ್ಯಾಣ್ ಬೊಟ್ಟುಮಾಡುತ್ತಾರೆ.



ಜಾನಪದ ದಿರಿಸಿನಲ್ಲಿ ಮೈತಿ ಸ್ವಯಂಸೇವಕಿಯರು

ಮೈತಿ ಕೆಲಸವನ್ನು, ಹಸಿರನ್ನು ಹೆಚ್ಚಿಸಬಯಸುತ್ತದೆಯೇ ಹೊರತು ಸಂಘಟನೆಯ ಅಸ್ತಿತ್ವವನ್ನಲ್ಲ. ಹಾಗೆ ನೋಡಿದರೆ, ಇಷ್ಟು ದೊಡ್ಡ ಆಂದೋಲನಕ್ಕೆ ಅವರದ್ದೇ ಆದ ಒಂದು ಕಚೇರಿಯಿಲ್ಲ. ಸಿಬ್ಬಂದಿ ಇಲ್ಲ. ಕಲ್ಯಾಣ್ ಸರಕಾರಿ ನೌಕರರು. ಸರ್ವಶಿಕ್ಷಾ ಅಭಿಯಾನದ ಜಂಟಿ ಸಂಚಾಲಕರು. ಜಿಲ್ಲೆಯೊಳಗೆ ಧಾರಾಳ ಪ್ರವಾಸ. ವೃತ್ತಿಯ ಸಮಯ ಬಿಟ್ಟು ಉಳಿದೆಲ್ಲಾ ಕಾಲ ಇದಕ್ಕೇ ಮೀಸಲು.

ಆಂದೋಲನಕ್ಕೆ ಸಂಪನ್ಮೂಲ ಹೊಂದಿಕೆ ಹೇಗೆ? ಪ್ರಶ್ನೆ ಹಾಕಿದೆ "ನಾವು ಸ್ನೇಹಿತರು, ಹಿತೈಷಿಗಳ ಸಂತೋಷದ ಕೊಡುಗೆಯನ್ನಷ್ಟೇ ಸ್ವೀಕರಿಸಿದ್ದೇವೆ. ಬೇರೆಬೇರೆ ಊರುಗಳಲ್ಲಿನ ಮೈತಿ ಬಳಗಗಳು ಅಲ್ಲಲ್ಲಿಂದಲೇ ಹಣ ರೂಢಿಸಿಕೊಳ್ಳಬೇಕು. ಒಂದಷ್ಟು ಕರಪತ್ರಗಳು ಮತ್ತು ನೇರ ಸಂಪರ್ಕವೇ ಪ್ರಚಾರದ ವಿಧಾನ. ಕ್ಯಾಲಿಫೋರ್ನಿಯಾದಲ್ಲಿ



ಗಿಡ ಹಚ್ಚುತ್ತಿರುವ ಮದುಮಕ್ಕಳು

ಪ್ರೊಫೆಸರ್ ಆಗಿರುವ ಮಾಯಾ ಚಡ್ಡಾ 10,000 ಮಡಚುಕಾಗದ ಮುದ್ರಿಸಿ ಕೊಟ್ಟಿದ್ದಾರೆ." ಎಂದರು ಕಲ್ಯಾಣ್.

ಉತ್ತರಾಂಚಲದಲ್ಲಿ ಮದುವೆಯ ಸಂದರ್ಭದಲ್ಲಿ ಹೆಣ್ಮಕ್ಕಳು ಹಾಡುವ 'ಮಂಗಲ್‌ಗೀತ್'ಗಳು ಜನಪ್ರಿಯ. ಈ ಹಾಡುಗಳಲ್ಲಿ 'ಮೈತಿ'ಯ ಸಾರವನ್ನೂ ಇಲ್ಲಿನ ಮಹಿಳೆಯರು ಬೆರೆಸಿದರು. ಇವು ಈಗ ಮೈತಿ ಗೀತೆಗಳು ಅಂತ ಕ್ಯಾಸೆಟ್ ರೂಪದಲ್ಲಿ ಹೊರಬಂದಿವೆ.

ಹಿಮಾಲಯದ ತಪ್ಪಲಿನ ಗುಡ್ಡಬೆಟ್ಟಗಳಿಂದ ಈಗ ಈ ಆಚರಣೆ ಗಡಿಯಿಂದಾಚೆಯೂ ಹಬ್ಬತೊಡಗಿದೆ. ರಾಜಸ್ಥಾನ, ಮಧ್ಯಪ್ರದೇಶ, ಆಂಧ್ರ ಪ್ರದೇಶ, ಗುಜರಾತ್, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಅಸ್ಸಾಂ, ಜಮ್ಮು–ಕಾಶ್ಮೀರಗಳಿಗೂ ವ್ಯಾಪಿಸಿದೆ. ಉತ್ತರಾಂಚಲ ಮತ್ತು ಜಮ್ಮು–ಕಾಶ್ಮೀರ ರಾಜ್ಯಗಳು ಮೈತಿ ಕಾರ್ಯಕ್ರಮವನ್ನು ಪಠ್ಯಪುಸ್ತಕದಲ್ಲಿ ಅಳವಡಿಸಿವೆ. ಕೆಲವು ರಾಜ್ಯಗಳ ರಾಷ್ಟ್ರೀಯ ಸ್ವಯಂ ಸೇವಾ ಯೋಜನೆಯ ಕೆಲಸದಲ್ಲೂ ಮೈತಿಗೆ ಜಾಗ ಸಿಕ್ಕಿದೆ.

'ಮೈತಿ ನೇಪಾಲ್' ಎನ್ನುವ ಹೆಸರಿನಲ್ಲಿ ಈ ಕಾರ್ಯಕ್ರಮ ನೇಪಾಲದಲ್ಲಿ ಹೆಸರು ಮಾಡಿದೆಯಂತೆ. ಇಂಗ್ಲೆಂಡ್, ಥಾಯ್ಲೆಂಡ್, ಕೆನಡಾ ಮತ್ತು ಚೀನಾದ ಗಮನ ಸೆಳೆದಿದೆ. ಕೆನಡಾದ ಮಾಜಿ ವಿತ್ತ ಸಚಿವೆ ಫ್ಲೋರಾ ಡೊನಾಲ್ಡ್ ಸ್ವತಃ ಡೆಹ್ರಾಡೂನ್‌ಗೆ ಬಂದು ಮೆಚ್ಚುಗೆ ವ್ಯಕ್ತಪಡಿಸಿದ್ದರಂತೆ.

"ದೂರದಲ್ಲಿರುವ ಹಿತೈಷಿಗಳು ಒಂದಷ್ಟು ಮೊತ್ತ ಕಳಿಸಿಕೊಟ್ಟರೆ ಅವರ ಪರವಾಗಿ ಗಿಡ ನೆಡುವ ವ್ಯವಸ್ಥೆ ಏನಾದರೂ ನಿಮ್ಮಲ್ಲಿದೆಯೇ?"– ಕಲ್ಯಾಣ್ ಅವರನ್ನು ಕೇಳಿದೆ. "ಇದೆ. ಗಿಡ ನೆಡಬೇಕೆಂದರೆ ಅವರು ಹಣ ಕೊಡಬೇಕೆಂದೇನೂ ಇಲ್ಲ. ತಮ್ಮ ಹೆಸರಲ್ಲಿ ನೆಡಬೇಕು ಅಂತ ವಿನಂತಿ ಮಾಡಿಕೊಂಡರೆ ಸಾಕು. ಅಷ್ಟಕ್ಕೂ ಮೇಲೆ ಸ್ವಸಂತೋಷದಿಂದ ದೇಣಿಗೆ ಕೊಟ್ಟರೆ ಪ್ರೀತಿಯಿಂದ ಸ್ವೀಕರಿಸುತ್ತೇವೆ" ಎಂದ ಕಲ್ಯಾಣ್ ಅವರ ಮಾತಿನಲ್ಲಿ ವಿನಮ್ರತೆಯಿತ್ತು, ಉತ್ಸಾಹ ತುಂಬಿತ್ತು; ದೂರು–ಗೊಣಗಾಟಗಳ ಛಾಯೆ ಇರಲಿಲ್ಲ. ಇಂತಹ 'ಭೂಮಿ ರಿಪೇರಿ' ಮಾಡಹೊರಟ ಹರಿಕಾರರಿಗೆ ಈ ಬಗೆಯ ಗುಣಗಳು ದೊಡ್ಡ ಅಸ್ತ್ರ.

ವಿಳಾಸ: Kalyan Sing Rawat
Maiti Andolan
No. 7, Ajabpur Kalan Post,
Mata Mandir Marg
DEHRADUN-268121
ದೂರವಾಣಿ: 094124 37242